## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ, ಇವರ ನ್ಯಾಯಾಲಯ

**ಸ್ಪೆಷಲ್ ಕೇಸ್ (ಭ್ರಷ್ಟಾಚಾರ) ನಂ.07/2021**

ಫಿರ್ಯಾದಿದಾರರು:- ಕರ್ನಾಟಕ ಸರ್ಕಾರ

*-:ವಿರುದ್ಧ:-*

ಆರೋಪಿತರು :- ಬಸವರಾಜ ತಂದೆ ಭೀಮಶಿ ತೇಲಿ

### ದಂಡ ಪ್ರಕ್ರಿಯಾ ಸಂಹಿತೆಯ ಕಲಂ. 313 ರಡಿ ಹೆಚ್ಚುವರಿ ಆಪಾದಿತನ ಹೇಳಿಕೆ

=======

ಆಪಾದಿತನ ಹೆಸರು : ಬಸವರಾಜ ತೇಲಿ

ತಂದೆಯ ಹೆಸರು : ಭೀಮಶಿ

ವಯಸ್ಸು : 52 ವರ್ಷ

ಉದ್ಯೋಗ :

ವಾಸಸ್ಥಳ : ಸಾ: ಹಿರೇಬೇವನೂರ, ತಾ:ಇಂಡಿ, ಜಿಲ್ಲಾ: ವಿಜಯಪುರ

=======

ಪ್ರಶ್ನೆ1: ಅಭಿಯೋಜನಾ ಪರ ವಿಚಾರಣೆಯಾಗಿರುವ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದಿರಲ್ಲವಾ?

ಉತ್ತರಃ

ಪ್ರಶ್ನೆಃ2. ಪ್ರಾ.ಸಾ.01 ಮಹಾಂತೇಶ ತಂದೆ ಭೋಗಪ್ಪ ಅಗಸರ, ತಮ್ಮ ಸಾಕ್ಷ್ಯದಲ್ಲಿ, ಅವರ ತಂದೆಗೆ ಸೇರಿದ ದೇವರ ಹಿಪ್ಪರಗಿ ತಾಲೂಕಿನ ಹಂದಿಗನೂರು ಗ್ರಾಮದಲ್ಲಿ ಜಮೀನ ಸರ್ವೆ ನಂ: 111/1 ಆಗಿದ್ದು, ಅದರ ವಿಸ್ತೀರ್ಣ 03 ಎಕರೆ 12 ಗುಂಟೆ ಜಮೀನು ವರಕನಹಳ್ಳಿ ಗ್ರಾಮದ ಹದ್ದಿಯಲ್ಲಿ ಇದ್ದು, ಅದರಿಂದ ಚಿಮ್ಮಲಗಿ ಏತ ನಿರಾವರಿ ಕಾಲುವೆ ಸಲುವಾಗಿ

ಒಂದು ಎಕರೆ ಜಮೀನನ್ನು 2015 ರಲ್ಲಿ ಸರ್ಕಾರದವರು ವಶಪಡಿಸಿಕೊಂಡಿದ್ದು, ಅದಕ್ಕಾಗಿ ಸರ್ಕಾರದವರು ರೂ. 2,85,000/- ಪರಿಹಾರದ ಹಣವನ್ನು ಮಂಜೂರು ಮಾಡಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:3. ಪ್ರಾ.ಸಾ.01 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅವರ ಜಮೀನಿನ ಬಗ್ಗೆ ಸರ್ಕಾರದವರು ಘೋಷಣೆ ಮಾಡಿದ ಪರಿಹಾರದ ಹಣವನ್ನು ಪಡೆದುಕೊಳ್ಳುವ ವಿಚಾರವಾಗಿ ದಿ: 03-01-2020 ರಂದು ಅವರು ಇಂಡಿಯ ಕಂದಾಯ ಇಲಾಖೆ ಕಚೇರಿಗೆ ಹೋಗಿದ್ದು, ಅಲ್ಲಿ ಆರೋಪಿ ಬಸವರಾಜ ತೇಲಿ ಆದ ನೀವು ಅಲ್ಲಿಯ ಕಂದಾಯ ನಿರೀಕ್ಷಕರಾಗಿದ್ದು, ಸದರಿ ಪರಿಹಾರ ಹಣದ ಸಲುವಾಗಿ ನಿಮಗೆ ಭೇಟಿ ಆದಾಗ ಆರೋಪಿಯಾದ ನೀವು ರೂ. 4000/-ಗಳ ಲಂಚದ ಬೇಡಿಕೆ ಇಟ್ಟಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:4. ಪ್ರಾ.ಸಾ.01 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆ ರೀತಿ ಆರೋಪಿಯಾದ ನೀವು ಲಂಚದ ಬೇಡಿಕೆ ಇಟ್ಟಿದ್ದನ್ನು ಅವರ ಮೊಬೈಲನಲ್ಲಿ ರೇಕಾರ್ಡ ಮಾಡಿಕೊಂಡಿದ್ದು, ಅದೇ ದಿನ ಎ.ಸಿ.ಬಿ. ಕಚೇರಿಗೆ ಹೋಗಿ, ಅದನ್ನು ಎಸಿಬಿ ಪೋಲಿಸರಿಗೆ ಕೊಟ್ಟು, ನಿ.ಪಿ.1 ರಂತೆ ದೂರನ್ನು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:5. ಫ್ರಾ.ಸಾ.01 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಎಸಿಬಿ ಪೋಲಿಸರು ಪಂಚರಾದ ಚಾಸಾ-2 ಮತ್ತು ಚಾಸಾ-3 ರವರನ್ನು ಕರೆಸಿ, ಅವರಿಗೆ ಆರೋಪಿಯಾದ ನಿಮ್ಮೊಂದಿಗೆ ಮಾತಾನಾಡಿದ ಅವರ ಮೊಬೈಲನಲ್ಲಿ ರೇಕಾರ್ಡ ಮಾಡಿಕೊಂಡಿದ್ದ ಸುಮಾರು 13 ನಿಮಿಷ 8 ಸೆಕೆಂಡಿನ ಸಂಭಾಷಣೆಯನ್ನು ಕೇಳಿಸಿ, ಪೋಲಿಸರು ಅದನ್ನು ಸಿಡಿಯಲ್ಲಿ ದಾಖಲಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:6. ಫ್ರಾ.ಸಾ.01 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಅವರು ಎಸಿಬಿ ಪೋಲಿಸರಿಗೆ ರೂ.500/- ಮುಖಬೆಲೆಯ 8 ನೋಟುಗಳು ಅಂದರೆ ರೂ. 4000/- ಗಳನ್ನು ಕೊಟ್ಟಿದ್ದು, ಅದನ್ನು ಪೋಲಿಸರು ಪಂಚರಿಗೆ ಕೊಟ್ಟು, ಒಬ್ಬ ಪಂಚನಿಂದ ಓದಿಸಿ, ಇನ್ನೊಬ್ಬ ಪಂಚನಿಂದ ಬರವಣಿಗೆ ಮಾಡಿಸಿಕೊಂಡು, ಅವುಗಳಿಗೆ ಪೌಡರ ಹಚ್ಚಿ, ಅದನ್ನು 1 ನೇ ಪಂಚನಿಂದ ಅವರಿಗೆ ಕೊಟ್ಟು, ಆರೋಪಿಯಾದ ನೀವು ಕೇಳಿದಾಗ ಅದನ್ನು ಕೊಟ್ಟು, ತಲೆಯ ಮೇಲೆ ಕೈಯಾಡಿಸಿದ ಹಾಗೆ ಮಾಡಿ, ಸನ್ನೆ ಮಾಡಲು ಸೂಚಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:7. ಫ್ರಾ.ಸಾ.01 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಎಸಿಬಿ ಪೋಲಿಸರು ಚಾಸಾ-2 ರವರ ಕೈಗಳನ್ನು ಒಂದು ಬಟ್ಟಲಿನಲ್ಲಿದ್ದ ನೀರಿನಲ್ಲಿ ತೊಳೆಸಲಾಗಿ ಅದು ಗುಲಾಬಿ ಬಣ್ಣದ್ದಾಗಿದ್ದು, ಅದನ್ನು ಒಂದು ಗಾಜಿನ ಬಾಟಲಿಯಲ್ಲಿ ಶೇಖರಿಸಿಕೊಂಡು, ಅಲ್ಲಿ ನಡೆದ ಎಲ್ಲ ಪ್ರಕ್ರಿಯೇಗಳ ಬಗ್ಗೆ ನಿ.ಪಿ.2 ರಂತೆ ಪಂಚನಾಮೆ ಮಾಡಿ, ಅವರ ಸಹಿಯನ್ನು ಪಡೆದುಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:8. ಫ್ರಾ.ಸಾ.01 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಎಸಿಬಿ ಪೋಲಿಸರು ಮತ್ತು ಪಂಚರೊಂದಿಗೆ ಇಲಾಖಾ ವಾಹನದಲ್ಲಿ ಇಂಡಿಯ ರೈಲ್ವೆ ಸ್ಟೇಷನ್ ಹತ್ತಿರ ಇರುವ ಕಂದಾಯ ಇಲಾಖೆಗೆ ಮಧ್ಯಾಹ್ನ 1.00 ಗಂಟೆಗೆ ಹೋಗಿದ್ದು, ಅಲ್ಲಿ ಮೊದಲೇ ಸೂಚಿಸಿದ ಮೇರೆಗೆ ಅವರು ಮತ್ತು ಚಾಸಾ-2 ರವರು ಸೇರಿ ಆರೋಪಿಯಾದ ನಿಮ್ಮ ಕೊಠಡಿಗೆ ಹೋಗಿದ್ದು, ಅಲ್ಲಿ ಆರೋಪಿಯಾದ ನೀವು ಅವರಿಗೆ ಲಂಚದ ಹಣದ ತಂದಿದ್ದಿರಾ ಎಂದು ಕೇಳಿದ್ದು, ಅದಕ್ಕೆ ಅವರು ತಂದಿದ್ದೇನೆ ಎಂದು ಹೇಳಿ ರೂ.4000/- ಗಳನ್ನು ನಿಮಗೆ ಕೊಟ್ಟಿದ್ದು, ಅದನ್ನು ನೀವು ನಿಮ್ಮ ಬಲಗೈಯಿಂದ ಪಡೆದುಕೊಂಡು, ಪ್ಯಾಂಟಿನ

ಹಿಂಬದಿ ಬಲ ಜೇಬಿನಲ್ಲಿ ಇಟ್ಟಿಕೊಂಡಿರುತ್ತಿರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:9. ಪ್ರಾ.ಸಾ.01 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆ ರೀತಿ ಹಣ ಕೊಟ್ಟ ನಂತರ ಅವರು ಹೊರಗಡೆ ಬಂದು ತಲೆ ಮೇಲೆ ಕೈಯಾಡಿಸಿದ ಹಾಗೆ ಮಾಡಿ ಸನ್ನೆ ಮಾಡಿದ ನಂತರ ಎಸಿಬಿ ಪೋಲಿಸರು ಅಲ್ಲಿಗೆ ಬಂದು ಆರೋಪಿಯಾದ ನಿಮಗೆ ಲಂಚದ ಹಣ ಎಲ್ಲಿಟ್ಟಿದ್ದಿರಾ ಎಂದು ಕೇಳಿದಾಗ ನೀವು ಏನು ಹೇಳದೇ ಇದ್ದಾಗ, ಎಸಿಬಿ ಪೋಲಿಸರು ಅವರಿಗೆ ಕೇಳಿದ್ದು, ಅವರು ನೀವು ಅದನ್ನು ಬಲಗೈಯಿಂದ ಪಡೆದುಕೊಂಡು ನಿಮ್ಮ ಪ್ಯಾಂಟಿನ ಹಿಂಬದಿ ಜೇಬಿನಲ್ಲಿ ಇಟ್ಟುಕೊಂಡಿರುವುದಾಗಿ ಹೇಳಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:10. ಪ್ರಾ.ಸಾ.01 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಪೋಲಿಸರು ಆರೋಪಿಯಾದ ನಿಮ್ಮ ಕೈಯನ್ನು ನೀರಿನಲ್ಲಿ ತೊಳೆಸಲಾಗಿ ಅದು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಅದನ್ನು ಒಂದು ಗಾಜಿನ ಬಾಟಲನಲ್ಲಿ ಹಾಕಿ ಶೇಖರಿಸಿ, ಅದನ್ನು ಪ್ಯಾಕ ಮಾಡಿ, ಮೊಹರು ಮಾಡಿ, ಅಮಾನತ ಪಡೆಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:11. ಫ್ರಾ.ಸಾ.01 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಎಸಿಬಿ ಪೋಲಿಸರು ಆರೋಪಿಯಾದ ನಿಮ್ಮಿಂದ ಆ ಹಣವನ್ನು ಪಡೆದುಕೊಂಡು ಪಂಚರಿಗೆ ಕೊಟ್ಟು ಅದರ ಮೇಲೆ ಇದ್ದ ನಂಬರನ್ನು ತಾಳೆ ಮಾಡಿ ನೋಡಲು ಹೇಳಿದ್ದು, ಪಂಚರು ಅವುಗಳನ್ನು ನೋಡಿ, ಅವು ತಾಳೆ ಆಗುತ್ತಿರುವುದಾಗಿ ಹೇಳಿದ್ದು, ಅವುಗಳನ್ನು ಪೋಲಿಸರು ಅಮಾನತ ಪಡೆಸಿಕೊಂಡಿರುವುದಾಗಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:12. ಫ್ರಾ.ಸಾ.01 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಎಸಿಬಿ ಪೋಲಿಸರು ಆರೋಪಿಯಾದ ನಿಮಗೆ ಬೇರೆ ಪ್ಯಾಂಟಿನ ವ್ಯವಸ್ಥೆ ಮಾಡಿ, ನೀವು ಆ ದಿನ ತೊಟ್ಟಿದ್ದ ಪ್ಯಾಂಟಿನ ಹಿಂಬದಿ ಕಿಸೆಯನ್ನು ನೀರಿನಲ್ಲಿ ತೊಳೆಸಲಾಗಿ ಅದು ಗುಲಾಬಿ ಬಣ್ಣದಾಗಿದ್ದು, ಅದನ್ನು ಪೋಲಿಸರು ಒಂದು ಬಾಟಲಿನಲ್ಲಿ ಶೇಖರಿಸಿಕೊಂಡು, ಪ್ಯಾಕ ಮಾಡಿ, ಅಮಾನತ ಪಡೆಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:13. ಪ್ರಾ.ಸಾ.01 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಅವರ ಕೆಲಸಕ್ಕೆ ಸಂಬಂಧಿಸಿದಂತೆ ಚಾಸಾ–4 ಅನೀಲ ಕುಲಕರ್ಣಿ ರವರಿಂದ ಧೃಡಿಕರಿಸಿದ ಮೂರು ದಾಖಲೆಗಳನ್ನು ನಿ.ಪಿ.3 ರಿಂದ 5 ರಂತೆ ಪಡೆದುಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:14. ಪ್ರಾ.ಸಾ.01 ರವರು ಮುಂದುವರೆದ ತಮ್ಮ ಸಾಕ್ಷ್ಯದಲ್ಲಿ, ನಂತರ ಎಸಿಬಿ ಪೋಲಿಸರು ಅವರು ಮೊಬೈಲನಲ್ಲಿ ರೇಕಾರ್ಡ ಮಾಡಿಕೊಂಡು ಬಂದಿದ್ದ ಸಂಭಾಷಣೆಯನ್ನು ಕಂದಾಯ ಇಲಾಖೆಯಲ್ಲಿ ಎಲ್ಲರಿಗೂ ಕೇಳಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:15. ಪ್ರಾ.ಸಾ.01 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಆ ಸಂಭಾಷಣೆಯ ಪ್ರಿಂಟ ತೆಗೆದು ಅದನ್ನು ಅವರಿಂದ ಮತ್ತು ಆರೋಪಿಯಾದ ನಿಮ್ಮಿಂದ ಓದಿಸಿ, ಅದನ್ನು ಸಿಡಿಯಲ್ಲಿ ದಾಖಲಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:16. ಪ್ರಾ.ಸಾ.01 ರವರು ಮುಂದುವರೆದ ತಮ್ಮ ಸಾಕ್ಷ್ಯದಲ್ಲಿ, ಈ ಎಲ್ಲ ಪ್ರಕ್ರಿಯೇ ನಡೆದ ಬಗ್ಗೆ ಅಲ್ಲಿ ನಿ.ಪಿ.6 ರಂತೆ ಬರವಣಿಗೆ ಮಾಡಿಕೊಂಡು, ಅವರ ಸಹಿಯನ್ನು ಪಡೆದುಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:17. ಪ್ರಾ.ಸಾ.02 ಮಹಾಂತೇಶ ತಂದೆ ಮಲ್ಲಪ್ಪ ಹೊಳೆ, ತಮ್ಮ ಸಾಕ್ಷ್ಯದಲ್ಲಿ, ದಿ: 07.01.2020 ರಂದು ಎಸಿಬಿ ಪೋಲಿಸರು ಅವರ ಜಿಲ್ಲಾ ಖಜಾನೆ ಅಧಿಕಾರಿಗಳಿಗೆ ಒಂದು ಪತ್ರ ಕೊಟ್ಟು, ಅದರಲ್ಲಿ ಟ್ರ್ಯಾಪ್ ಕುರಿತು ಒಬ್ಬ ಸಿಬ್ಬಂದಿಯನ್ನು ನೇಮಿಸಿ ಎಂದು ಕೇಳಿಕೊಂಡಿದ್ದು,ಅವರ ಮೇಲಾಧಿಕಾರಿಗಳ ಸೂಚನೆ ಮೇರೆಗೆ ಅವರು ದಿ: 08.01.2020 ರಂದು ಬೆಳಿಗ್ಗೆ 10.00 ಗಂಟೆಗೆ ಎಸಿಬಿ ಕಚೇರಿಗೆ ಹೋಗಿದ್ದು, ಅಲ್ಲಿ ಚಾಸಾ–20 ಸಚಿನ ಚಲವಾದಿ ಇನ್ಸಪೇಕ್ಟರ ರವರು ಮತ್ತು ಚಾಸಾ–3 ಶಂಕ್ರಮ್ಮ ರವರು ಹಾಗೂ ದೂರುದಾರರಾದ ಮಹಾಂತೇಶ ಅಗಸರ ರವರು ಸಹ ಇದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:18. ಪ್ರಾ.ಸಾ.02 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅಲ್ಲಿ ಎಸಿಬಿ ಪೋಲಿಸರು ಅವರಿಗೆ ದೂರುದಾರರಿಗೆ ಪರಿಚಯ ಮಾಡಿಸಿಕೊಟ್ಟು, ದೂರಿನ ಪ್ರತಿಯನ್ನು ತೋರಿಸಿ, ಚಾಸಾ–20 ರವರು ಆರೋಪಿಯಾದ ನೀವು ದೂರುದಾರರರಿಂದ ರೂ.4000/–

ಲಂಚ ಕೇಳಿದ್ದು, ಆ ಬಗ್ಗೆ ಟ್ರ್ಯಾಪ ಮಾಡಲು ಹೋಗಬೇಕಾಗಿದೆ ನಿಮ್ಮನ್ನು ಪಂಚರಾಗಿ ನೇಮಿಸಿರುವುದಾಗಿ ಹೇಳಿ, ದೂರುದಾರರು ತಮ್ಮ ಮೊಬೈಲನಲ್ಲಿ ರೇಕಾರ್ಡ ಮಾಡಿಕೊಂಡು ಬಂದ ಸಂಭಾಷಣೆಯನ್ನು ಕೇಳಿಸಿ, ಸಿಡಿಯಲ್ಲಿ ದಾಖಲಿಸಿಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:19. ಪ್ರಾ.ಸಾ.02 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಪೋಲಿಸರು ದೂರುದಾರರು ಹಾಜರು ಪಡೆಸಿದ ರೂ.500/– ಮುಖಬೆಲೆಯ 8 ನೋಟಗಳ ನಂಬರನ್ನು ಓದಿ ಹೇಳಲು ಹೇಳಿದ್ದು, ಅದರಂತೆ ಚಾಸಾ–3 ರವರು ಬರವಣಿಗೆ ಮಾಡಿಕೊಂಡಿದ್ದು, ನಂತರ ಆ ನೋಟಗಳಿಗೆ ಪೌಡರನ್ನು ಹಚ್ಚಿ, ಚಾಸಾ–3 ರವರಿಂದ ಎಣಿಸಿ, ಅವರ ಕೈಗಳನ್ನು ನೀರಿನಲ್ಲಿ ತೊಳೆಯಲಾಗಿ ಅದು ಗುಲಾಬಿ ಬಣ್ಣದಾಗಿದ್ದು, ಅದನ್ನು ಒಂದು ಬಾಟಲಿನಲ್ಲಿ ಶೇಖರಿಸಿಕೊಂಡಿದ್ದು, ನಂತರ ಆ ನೋಟಗಳನ್ನು ಚಾಸಾ–3 ರವರಿಂದ ದೂರುದಾರರಿಗೆ ಕೊಟ್ಟಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:20. ಪ್ರಾ.ಸಾ.02 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಪೋಲಿಸರು ಅಲ್ಲಿ ಈ ಎಲ್ಲ ಪ್ರಕ್ರಿಯೇ ನಡೆದ ಬಗ್ಗೆ ನಿ.ಪಿ.2 ರಂತೆ ಪಂಚನಾಮೆ ಮಾಡಿ, ಅವರ

ಸಹಿಯನ್ನು ಪಡೆದುಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆಃ21. ಪ್ರಾ.ಸಾ.02 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಅವರು ಎರಡು ಜೀಪಗಳಿಂದ ಇಂಡಿಗೆ ಹೋಗಿ, ಅಲ್ಲಿ ರೈಲ್ವೆ ಸ್ಟೇಷನ್ ಹತ್ತಿರ ತಮ್ಮ ವಾಹನಗಳನ್ನು ನಿಲ್ಲಿಸಿ, ಚಾಸಾ–20 ರವರು ಅವರಿಗೆ ಮತ್ತು ದೂರುದಾರರಿಗೆ ಇಂಡಿಯ ಎಸ್.ಎಲ್.ಎ.ಓ ಆಫೀಸಿಗೆ ಹೋಗಲು ಹೇಳಿದ್ದು, ಅವರಿಗೆ ಅಲ್ಲಿ ನಡೆಯುವ ವಿದ್ಯಮಾನಗಳ ಬಗ್ಗೆ ಗಮನಿಸಲು ತಿಳಿಸಿದ್ದು, ಚಾಸಾ–20 ರವರು ಪಿರ್ಯಾದಿದಾರನಿಗೆ ಒಂದು ವೈಸ್ ರೇಕಾರ್ಡ ಕೊಟ್ಟು, ಆರೋಪಿಯ ಹತ್ತಿರ ಹೋಗಿ ನಿಮ್ಮ ಕೆಲಸದ ಬಗ್ಗೆ ಕೇಳಿ ಹಾಗೂ ಹಣ ಕೇಳಿದರೆ ಕೊಡಿ, ಹಾಗೂ ಹಣ ಕೊಟ್ಟ ನಂತರ ತಲೆಯ ಮೇಲೆ ಕೈಯಾಡಿಸಿದ ಹಾಗೆ ಸನ್ನೆ ಮಾಡಿ ಎಂದು ಹೇಳಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆಃ22. ಪ್ರಾ.ಸಾ.02 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಅವರು ಮತ್ತು ದೂರುದಾರರು ಸೇರಿ ಇಂಡಿಯ ಎಸ್.ಎಲ್.ಎ.ಓ ಕಚೇರಿಯ ಆರೋಪಿಯಾದ ನಿನ್ನ ಹತ್ತಿರ ಬಂದು ದೂರುದಾರರಾದ ಮಹಾಂತೇಶ ಅಗಸರ ಅವರ ಕೆಲಸದ ಬಗ್ಗೆ

ಆರೋಪಿಯಾದ ನಿನ್ನೊಂದಿಗೆ ಮಾತನಾಡಿ, ನಂತರ ಹೊರಗೆ ಬಂದು ತಲೆ ಮೇಲೆ ಕೈ ಆಡಿಸಿದ ಹಾಗೆ ಮಾಡಿ ಪೋಲಿಸರಿಗೆ ಸಿಗ್ನಲ್ ಮಾಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:23. ಫಾ್ರ.ಸಾ.02 ರವರು ಮುಂದುವರೆದ ತಮ್ಮ ಸಾಕ್ಷ್ಯದಲ್ಲಿ, ದೂರುದಾರರು ಆ ರೀತಿ ಸನ್ನೆ ಮಾಡಿದ ನಂತರ ಚಾಸಾ−20 ಸಚಿತ ಚಲವಾದಿ, ಚಾಸಾ−3 ಶಂಕ್ರಮ್ಮ ಮತ್ತು ಪೋಲಿಸ್ ಸಿಬ್ಬಂದಿಗಳು ಅಲ್ಲಿಗೆ ಬಂದಿದ್ದು, ಚಾಸಾ−20 ರವರು ದೂರುದಾರರಿಗೆ ಏನು ನಡೆಯಿತು ಎಂದು ಕೇಳಿದಾಗ ಆತ ಆರೋಪಿಯಾದ ನಿನಗೆ ಕೆಲಸದ ಬಗ್ಗೆ ಕೇಳಿದಾಗ ಆರೋಪಿಯಾದ ನೀನು ಲಂಚದ ಹಣ ಕೊಡು ಎಂದು ಕೇಳಿದ್ದು, ಅವರು ಹಣವನ್ನು ಕೊಟ್ಟಿದ್ದು, ಅದನ್ನು ಆರೋಪಿಯಾದ ನೀವು ನಿಮ್ಮ ಬಲಗೈಯಿಂದ ತೆಗೆದುಕೊಂಡು ಪ್ಯಾಂಟಿನ ಹಿಂದಿನ ಕಿಸೆಯಲ್ಲಿ ಇಟ್ಟುಕೊಂಡಿರುವುದಾಗಿ ಹೇಳಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:24. ಫಾ್ರ.ಸಾ.02 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಇನ್ಸಪೆಕ್ಟರ್ ಆದ ಚಾಸಾ−20 ರವರು ಆರೋಪಿಯಾದ ನಿಮ್ಮ ಕೈಗಳನ್ನು ನೀರಿನಲ್ಲಿ ತೊಳೆಸಲಾಗಿ ಅದು

ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಅದನ್ನು ಒಂದು ಗಾಜಿನ ಬಾಟಲಿಯಲ್ಲಿ ಶೇಖರಿಸಿಕೊಂಡು, ಮೊಹರು ಮಾಡಿ, ಅಮಾನತ ಪಡೆಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:25. ಫ್ರಾ.ಸಾ.02 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಚಾಸಾ-20 ರವರು ಆರೋಪಿಯಾದ ನಿಮಗೆ ಬೇರೆ ಪ್ಯಾಂಟಿನ ವ್ಯವಸ್ಥೆ ಮಾಡಿಸಿ, ಆ ದಿನ ನೀವು ತೊಟ್ಟಿದ್ದ ಪ್ಯಾಂಟಿನ ಹಿಂಬದಿ ಕಿಸೆಯನ್ನು ಧ್ರಾವಣದಲ್ಲಿ ತೊಳೆಸಲಾಗಿ ಅದು ಗುಲಾಬಿ ಬಣ್ಣದ್ದಾಗಿದ್ದು, ಅದನ್ನು ಚಾಸಾ-20 ರವರು ಒಂದು ಬಾಟಲಿಯಲ್ಲಿ ಹಾಕಿ ಶೇಖರಿಸಿಕೊಂಡು, ಆ ಪ್ಯಾಂಟನ್ನು ಅಮಾನತ ಪಡೆಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:26. ಫ್ರಾ.ಸಾ.02 ರವರು ಮುಂದುವರೆದ ತಮ್ಮ ಸಾಕ್ಷ್ಯದಲ್ಲಿ, ನಂತರ ಚಾಸಾ-20 ರವರು ದೂರುದಾರರಿಗೆ ಸೇರಿದ ಆರೋಪಿಯಾದ ನಿಮ್ಮ ಹತ್ತಿರ ಇದ್ದ ಫೈಲನ್ನು **SLAO** ವಿಶೇಷ ತಹಶೀಲ್ದಾರರಾದ ಅನೀಲ ಕುಲಕರ್ಣಿಯವರಿಂದ ಧೃಡಿಕರಿಸಿ, ಪಡೆದುಕೊಂಡರು ಹಾಗೂ ಆರೋಪಿಯಾದ ನಿಮ್ಮಿಂದ ನಿ.ಪಿ.7 ರಂತೆ ಸಮಜಾಯಿಸಿಯನ್ನು ಸಹ ಪಡೆದುಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:27. ಫ್ರಾ.ಸಾ.02 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಪೋಲಿಸರು ದೂರುದಾರರು ಮೊಬೈಲನಲ್ಲಿ ಹಾಗೂ ವೈಸ್ ರೇಕಾರ್ಡನಲ್ಲಿ ರೇಕಾರ್ಡ ಮಾಡಿಕೊಂಡು ಬಂದಿದ್ದ ಸಂಭಾಷಣೆಯನ್ನು ಕಂಪ್ಯೂಟರನಲ್ಲಿ ಬೆರಳಚ್ಚು ಮಾಡಿಸಿ, ಪ್ರಿಂಟ ತೆಗೆದು ಅದನ್ನು ಆರೋಪಿಯಾದ ನಿಮ್ಮಿಂದ ಮತ್ತು ದೂರುದಾರರಿಂದ ಮೂರು ಮೂರು ಸಾರಿ ಓದಿಸಿ, ಅದನ್ನು ಸಿಡಿಗಳಲ್ಲಿ ದಾಖಲಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:28. ಫ್ರಾ.ಸಾ.02 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಪೋಲಿಸರು ಈ ಎಲ್ಲ ಪ್ರಕ್ರಿಯೇ ನಡೆದ ಬಗ್ಗೆ ನಿ.ಪಿ.6 ರಂತೆ ಬರವಣಿಗೆ ಮಾಡಿಕೊಂಡು, ಅವರ ಮತ್ತು ಚಾಸಾ-3 ರವರ ಸಹಿಗಳನ್ನು ಪಡೆದುಕೊಂಡಿರುವುದಾಗಿ ಹಾಗೂ ಈ ಬಗ್ಗೆ ಅವರು ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:29. ಫ್ರಾ.ಸಾ.03 ಅನೀಲ ತಂದೆ ರಾಮಚಂದ್ರ ಕುಲಕರ್ಣಿ, ತಮ್ಮ ಸಾಕ್ಷ್ಯದಲ್ಲಿ, ದಿ: 08.01.2020 ರಂದು ಬೆಳಿಗ್ಗೆ 11.00 ಗಂಟೆಗೆ ಅವರು ಇಂಡಿಯ ಉಪವಿಭಾಗಾಧಿಕಾರಿ

ಕಚೇರಿಯಲ್ಲಿದ್ದಾಗ, ಅವರ ಸಿಬ್ಬಂದಿ ಫೋನ ಮಾಡಿ, ಎಸಿಬಿ ಪೋಲಿಸರು ಬಂದಿದ್ದಾರೆ ಬನ್ನಿ ಎಂದು ತಿಳಿಸಿದ ಮೇರೆಗೆ ಆ ದಿನ ಮಧ್ಯಾಹ್ಣ 2.30 ಗಂಟೆಗೆ ಅವರು ಕಚೇರಿಗೆ ಮರಳಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆಃ30. ಪ್ರಾ.ಸಾ.03 ರವರು ಮುಂದುವರೆದ ತಮ್ಮ ಸಾಕ್ಷ್ಯದಲ್ಲಿ, ಅವರು ಕಚೇರಿಗೆ ಬಂದಾಗ ಅಲ್ಲಿ ಚಾಸಾ–5 ರಿಂದ ಚಾಸಾ–7 ರವರು ಇದ್ದು, ಅವರಿಗೆ ಕಚೇರಿಯಲ್ಲಿ ಆರೋಪಿಯಾದ ನೀವು ಲಂಚ ಸ್ವೀಕರಿಸುವ ಸಮಯದಲ್ಲಿ ಟ್ರ್ಯಾಪ ಮಾಡಲಾಗಿದೆ ಎಂದು ತಿಳಿಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆಃ31. ಪ್ರಾ.ಸಾ.03 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಎಸಿಬಿ ಪೋಲಿಸರು ಅವರಿಗೆ ದೂರುದಾರರಿಗೆ ಸಂಬಂಧಪಟ್ಟ ದಾಖಲೆಗಳನ್ನು ಕೊಡಲು ತಿಳಿಸಿದ್ದು, ಆ ಮೇರೆಗೆ ಎಸಿಬಿ ಇನ್ಸಪೇಕ್ಟರ ಅವರಿಗೆ ನಿ.ಪಿ.3 ರಿಂದ 5 ದಾಖಲೆಗಳನ್ನು ಧೃಡಿಕರಿಸಿ ಕೊಟ್ಟಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:32. ಪ್ರಾ.ಸಾ.04 ಪ್ರಮೀಳಾ ಬಂದುರಾವ ದಿವಾನಜಿ, ರವರು ತಮ್ಮ ಸಾಕ್ಷ್ಯದಲ್ಲಿ, ದಿ:08.01.2020 ರಂದು ಎಸಿಬಿ ಪೋಲಿಸರು ನಮ್ಮ ಕಚೇರಿಗೆ ಬಂದಿದ್ದು, ಅಲ್ಲಿ ಆರೋಪಿಯಾದ ನಿಮ್ಮ ಕೈಗಳನ್ನು ತೊಳೆಯದಂತೆ ಹಿಡಿದು, ನಿಮ್ಮನ್ನು ವಿಚಾರಿಸಲಾಗಿ, ನೀವು ದೂರುದಾರರಾದ ಮಹಾಂತೇಶ ಅಗಸರ ರವರಿಂದ ರೂ.4000/- ಲಂಚದ ಹಣವನ್ನು ಪಡೆದಿರುವುದಾಗಿ ಗೊತ್ತಾಯಿತು ಹಾಗೂ ಆ ಸಮಯದಲ್ಲಿ ಕಚೇರಿಯಲ್ಲಿ ಅವರು ಮತ್ತು ಚಾಸಾ-6 ರಿಂದ 9 ರವರು ಇದ್ದೇವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:33. ಪ್ರಾ.ಸಾ.04 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಚಾಸಾ-4 ರವರು ಕಚೇರಿಗೆ ಬಂದಿದ್ದು, ಅವರಿಗೆ ಸದರಿ ವಿಷಯ ತಿಳಿಸಿ ಅವರಿಂದ ದೂರುದಾರರಿಗೆ ಸಂಬಂಧಿಸಿದ ದಾಖಲೆಗಳನ್ನು ಧೃಡಿಕರಿಸಿ ಪಡೆದುಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:34. ಪ್ರಾ.ಸಾ.04 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಎಸಿಬಿ ಪೋಲಿಸರು ವೈಸ್ ರೇಕಾರ್ಡಿಂಗನಲ್ಲಿರುವ ಸಂಭಾಷಣೆಯನ್ನು ಕೇಳಿಸಿ, ಅದರಲ್ಲಿದ್ದ ಆರೋಪಿಯಾದ ನಿಮ್ಮ ಧ್ವನಿಯನ್ನು ಗುರುತಿಸಲು ಹೇಳಿದ್ದು, ಅದರಂತೆ ಅವರು

ಆರೋಪಿಯಾದ ನಿಮ್ಮ ಧ್ವನಿಯನ್ನು ಗುರುತಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:**35**. ಪ್ರಾ.ಸಾ.**05** ಪ್ರಭಾಕರ ತಂದೆ ಹನಮಂತಪ್ಪ ಚೇನಿ, ತಮ್ಮ ಸಾಕ್ಷ್ಯದಲ್ಲಿ, ದಿ: 06.01.2021 ರಂದು ಅವರ ಕಚೇರಿಗೆ ಮಹಾ ವ್ಯವಸ್ಥಾಪಕರು ಪುನರ ವಸತಿ ಮತ್ತು ಪುನರ ಕೇಂದ್ರ ಹಾಗೂ ಭೂಸ್ವಾಧೀನ ಕೃಷ್ಣಾ ಮೇಲ್ದಂಡೆ ಯೋಜನೆ, ಬಾಗಲಕೋಟ ರವರಿಂದ ಒಂದು ಪತ್ರ ಬಂದಿದ್ದು, ಅದರಲ್ಲಿ ಆರೋಪಿ ಬಸವರಾಜ ಆದ ನಿಮ್ಮ ಮೇಲೆ ಭ್ರಷ್ಟಾಚಾರ ನಿಗ್ರಹ ದಳದವರು, ಭ್ರಷ್ಟಚಾರ ಪ್ರತಿಬಂಧಕ ಕಾಯ್ದೆ 7(ಎ)ರಲ್ಲಿ ಪ್ರಕರಣ ದಾಖಲಿಸಿರುವುದಾಗಿ ತಿಳಿಸಿರವುದಾಗಿ ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:**36**. ಪ್ರಾ.ಸಾ.**05** ರವರು ಮುಂದುವರೆದ ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಅವರ ಕಾರ್ಮಿಕರಾಗಿದ್ದು ಮಹಾ ವ್ಯವಸ್ಥಾಪಕರು ಪುನರ ವಸತಿ ಮತ್ತು ಪುನರ ಕೇಂದ್ರ ಹಾಗೂ ಭೂಸ್ವಾಧೀನ ಕೃಷ್ಣಾ ಮೇಲ್ದಂಡೆ ಯೋಜನೆ, ಬಾಗಲಕೋಟ ಇಲ್ಲಿ ನಿಯೋಜನೆ ಮೇಲೆ ಪ್ರಥಮ ದರ್ಜೆ ಕಂದಾಯ ನಿರೀಕ್ಷಕರು ಎಂದು ಕರ್ತವ್ಯ ಮಾಡುತ್ತಿದ್ದು, ನಿಮ್ಮ ಬಗ್ಗೆ

ಅಭಿಯೋಜನಾ ಮಂಜೂರಾತಿ ನೀಡಲು ಕೋರಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:37. ಪ್ರಾ.ಸಾ.05 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಪತ್ರದೊಂದಿಗೆ ಪಿರ್ಯಾದಿ, ಸಾಕ್ಷಿದಾರರ ಹೇಳಿಕೆಗಳು, ಪಂಚನಾಮೆ, ಚಾರ್ಜ ಶೀಟ್ ಹಾಗೂ ದಾಖಲೆಗಳನ್ನು ಕಳುಹಿಸಿದ್ದು, ಅವುಗಳನ್ನು ಪರಿಶೀಲಿಸಲಾಗಿ ಆರೋಪಿಯಾದ ನಿಮ್ಮ ವಿರುದ್ಧ ಅಭಿಯೋಜನಾ ಮಂಜೂರಾತಿ ನೀಡಲು ಸೂಕ್ತ ಪ್ರಕರಣವಾಗಿದೆ ಎಂದು ತಿಳಿದು, ಆರೋಪಿಯಾದ ನಿಮಗೆ ಅವರು ಸಕ್ಷಮ ಪ್ರಾಧಿಕಾರಿ ಆಗಿದ್ದರಿಂದ, ದಿ: 25.01.2021 ರಂದು ನಿ.ಪಿ.9 ರಂತೆ ಅಭಿಯೋಜನಾ ಮಂಜೂರಾತಿಯನ್ನು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:38. ಪ್ರಾ.ಸಾ.06 ಶಂಕರ ತಂದೆ ಭೀಮು ಚವ್ಹಾಣ, ತಮ್ಮ ಸಾಕ್ಷ್ಯದಲ್ಲಿ, ದಿ: 23.07.2020 ರಂದು ವಿಜಯಪುರ ಎಸಿಬಿ ಪೋಲಿಸರಿಂದ ಅವರ ಕಚೇರಿಯವರು ಒಂದು ಕೋರಿಕೆಯನ್ನು ಸ್ವೀಕರಿಸಿದ್ದು, ಅದರಲ್ಲಿ ಗುನ್ನೆ ಸ್ಥಳದ ನಕಾಶೆಯನ್ನು ತಯಾರಿಸಿ

ಕೊಡುವಂತೆ ಕೇಳಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:39. ಪ್ರಾ.ಸಾ.06 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅವರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಅವರಿಗೆ ಸ್ಥಳವನ್ನು ಪರಿಶೀಲಿಸಿ, ನಕಾಶೆಯನ್ನು ತಯಾರಿಸಿ ಕೊಡುವಂತೆ ಅವರಿಗೆ ತಿಳಿಸಿದ್ದು, ಆ ಮೇರೆಗೆ ದಿ: 28.07.2020 ರಂದು ಸದರಿ ಸ್ಥಳಕ್ಕೆ ಭೇಟಿ ನೀಡಿ, ಚಾಸಾ–13 ರವರು ತೋರಿಸಿದ ಸ್ಥಳದಲ್ಲಿ ಚಾಸಾ–2 ರವರ ಸಮಕ್ಷಮ ನಿ.ಪಿ.10 ರಂತೆ ನಕಾಶೆಯನ್ನು ತಯಾರಿಸಿ, ಪೂರೈಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:40. ಪ್ರಾ.ಸಾ.07 ಎಚ್.ಕೊಟ್ರೇಶ ತಂದೆ ಎಚ್. ಪರಶುರಾಮಪ್ಪ, ಪ್ರಾದೇಶಿಕ ರಾಸಾಯನಿಕ ಪರೀಕ್ಷಕರು, ಪ್ರಾದೇಶಿಕ ಪ್ರಯೋಗಾಲಯ, ಧಾರವಾಡ, ರವರು ತಮ್ಮ ಸಾಕ್ಷ್ಯದಲ್ಲಿ, ದಿ: 17.01.2020 ರಂದು ಪೊಲೀಸ್ ಅಧೀಕ್ಷಕರ ಕಚೇರಿ, ಭ್ರಷ್ಟಾಚಾರ ನಿಗ್ರಹ ದಳ, ಉತ್ತರ ವಲಯ, ಬೆಳಗಾವಿ ರವರಿಂದ ದಿ: 08.01.2020 ರಂದು ನಡೆದ ಅಪರಾಧ ಸಂಖ್ಯೆ : 01/2020 ಕ್ಕೆ ಸಂಬಂಧಿಸಿದಂತೆ 11 ಮೊಹರು ಮಾಡಿದ ಆರ್ಟಿಕಲಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಪಿ.ಸಿ. ಎಸ್.ಎಸ್.ಜಲಗೇರಿ, ರವರ ಮೂಲಕ ಮನವಿ

ಪತ್ರದೊಂದಿಗೆ ಕಳುಹಿಸಿದ್ದು, ಅದನ್ನು ಸ್ವೀಕರಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:41. ಫ್ರಾ.ಸಾ.07 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಆರ್ಟಿಕಲಗಳ ಮೇಲೆ ಇದ್ದ ಮೊಹರು ಸುಸ್ಥಿತಿಯಲ್ಲಿದ್ದು, ಅವು ತನಿಖಾಧಿಕಾರಿ ಕಳುಹಿಸಿದ ಮಾದರಿ ಮುದ್ರೆಯೊಂದಿಗೆ ತಾಳೇ ಆಗುತ್ತಿದ್ದವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:42. ಫ್ರಾ.ಸಾ.07 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರ್ಟಿಕಲ್ ನಂ.5, 7 ಮತ್ತು 11 ರಲ್ಲಿ ಪೆನಾಪ್ತಲಿನ ಮತ್ತು ಸೋಡಿಯಂ ಕಾರ್ಬೋನೇಟ ಎರಡು ಖಚಿತವಾಗಿರುವುದು ಕಂಡು ಬಂದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:43. ಫ್ರಾ.ಸಾ.07 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರ್ಟಿಕಲ್ ನಂ.4, 9 ಮತ್ತು 12 ರಲ್ಲಿ ಪೆನಾಪ್ತಲಿನ ಮತ್ತು ಆರ್ಟಿಕಲ್ ನಂ.2, 3, 6, 8 ಮತ್ತು 10 ರಲ್ಲಿ ಸೋಡಿಯಂ ಕಾರ್ಬೋನೇಟ ಇರುವುದು ಕಂಡು ಬಂದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:44. ಫ್ರಾ.ಸಾ.07 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ ಕರೆನ್ಸಿ ನೋಟಗಳು ಟ್ರ್ಯಾಪ್ ಕಾಲಕ್ಕೆ ವಶಪಡೆಸಿಕೊಂಡ ನೋಟಿನ ನಂಬರನೊಂದಿಗೆ ತಾಳೆ ಆಗುತ್ತಿದ್ದವು ಹಾಗೂ ಅವುಗಳನ್ನು '**Z**' ಅಕ್ಷರದಿಂದ ಗುರುತು ಮಾಡಿದ್ದು, ಅವು ಸುಸ್ಥಿತಿಯಲ್ಲಿ ಮತ್ತು ಸರಿಯಾಗಿದ್ದವು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:45. ಫ್ರಾ.ಸಾ.07 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಆರ್ಟಿಕಲಗಳನ್ನು ಪರೀಕ್ಷಿಸಲಾಗಿ ಆರ್ಟಿಕಲ್ ನಂ.4, 9 ಮತ್ತು 12 ರಲ್ಲಿ ಆರೋಪಿಯಾದ ನಿಮ್ಮ ಬಲಗೈ ಕೈಬೆರಳುಗಳನ್ನು ತೊಳೆದ ದ್ರಾವಣದಲ್ಲಿ ಫೆನಾಪ್ತಲೀನ ಇರುವುದು ಕಂಡು ಬಂದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:46. ಫ್ರಾ.ಸಾ.07 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಆರ್ಟಿಕಲಗಳನ್ನು ಪರೀಕ್ಷಿಸಿದ ನಂತರ ಪುನಃ ಪ್ಯಾಕ ಮಾಡಿ, ಮೊಹರು ಮಾಡಿ, ಪೋಲಿಸ್ ಅಧಿಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಉತ್ತರ ವಲಯ, ಬೆಳಗಾವಿ ರವರಿಗೆ ನಿ.ಪಿ.11 ರ ಅವರ ವರದಿಯೊಂದಿಗೆ ಮರಳಿ ಕಳಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:47. ಫ್ರಾ.ಸಾ.08 ಹರಿಶ್ಚಂದ್ರ ತಂದೆ ನಾರಾಯಣ ಗಣಾಚಾರಿ, ಆಗಿನ ಎಸಿಬಿ ಕಚೇರಿಯ ಪೋಲಿಸ್ ಇನ್ಸಪೇಕ್ಟರ್ ರವರು ತಮ್ಮ ಸಾಕ್ಷ್ಯದಲ್ಲಿ, ದಿ: 05.03.2020 ರಂದು ಈ ಪ್ರಕರಣದ ಮುಂದಿನ ತನಿಖೆಗಾಗಿ ಕಡತವನ್ನು ಶ್ರೀ. ಎಸ್.ಆರ್.ಗಣಾಚಾರಿ ರವರಿಂದ ಪಡೆದುಕೊಂಡು ಪರಿಶೀಲಿಸಿ, ತನಿಖೆಯನ್ನು ಮುಂದುವರೆಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:48. ಫ್ರಾ.ಸಾ.08 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ದಿ: 01.05.2020 ರಂದು ರಾಸಾಯನಿಕ ಪರೀಕ್ಷಾ ಕೇಂದ್ರ ಧಾರವಾಡ ಇಲ್ಲಿಂದ ನಿ.ಪಿ.11

ರಂತೆ ರಾಸಾಯನಿಕ ಪರೀಕ್ಷಾ ವರದಿ ಬಂದಿದ್ದು, ಅದನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:49. ಪ್ರಾ.ಸಾ.08 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ದಿ: 23.07.2020 ರಂದು ಸಹಾಯಕ ಇಂಜಿನಿಯರರಾದ ಚಾಸಾ–16 ರವರಿಗೆ ಗುನ್ನಾ ಸ್ಥಳದ ನಕಾಶೆಯನ್ನು ತಯಾರಿಸಿ ಕೊಡುವಂತೆ ಕೋರಿಕೆಯನ್ನು ನೀಡಿದ್ದು, ಸದರಿಯವರು ಸ್ಥಳವನ್ನು ಪರಿಶೀಲಿಸಿ ನಕಾಶೆಯನ್ನು ತಯಾರಿಸಿ ದಿ:28.07.2020 ರಂದು ನಿ.ಪಿ.12 ರಂತೆ ಪೂರೈಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:50. ಪ್ರಾ.ಸಾ.08 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿ: 24.09.2020 ರಂದು ಆರೋಪಿಯಾದ ನಿನ್ನ ವಿರುದ್ಧ ಅಭಿಯೋಜನಾ ಮಂಜೂರಾತಿ ಕೋರಿ ಅಭಿಯೋಜನಾ ಪ್ರಾಧಿಕಾರಕ್ಕೆ ಕೋರಿಕೆಯನ್ನು ಸಲ್ಲಿಸಿದ್ದು, ದಿ: 22.03.2021 ರಂದು ಅವರ ಮೇಲಾಧಿಕಾರಿಗಳಿಂದ ನಿ.ಪಿ.9 ರಂತೆ ನಿನ್ನ ವಿರುದ್ಧ ಅಭಿಯೋಜನಾ ಮಂಜೂರಾತಿಯನ್ನು ಪಡೆದುಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:51. ಪ್ರಾ.ಸಾ.08 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿ: 22.03.2021 ರಂದು ಪೋಲಿಸ ಅಧಿಕ್ಷಕರಿಗೆ ಆರೋಪಿಯಾದ ನಿನ್ನ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಲು ಅನುಮತಿಯನ್ನು ಕೋರಿ ನಿ.ಪಿ.15 ರಂತೆ ಪತ್ರ ಬರೆದಿದ್ದು, ಸದರಿಯವರು ದಿ: 16.04.2021 ರಂದು ನಿ.ಪಿ.16 ರಂತೆ ಅನುಮತಿಯನ್ನು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:52. ಪ್ರಾ.ಸಾ.08 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ದಿ: 26.04.2021 ರಂದು ಆರೋಪಿಯಾದ ನಿಮ್ಮ ವಿರುದ್ಧ ಅಭಿಯೋಜನಾ ಪ್ರಾಧಿಕಾರದಿಂದ ಮಂಜೂರಾತಿ ಸಿಕ್ಕಿದ್ದು, ಆ ಮೇರೆಗೆ ದಿ: 05.05.2021 ರಂದು ಮಾನ್ಯ ನ್ಯಾಯಾಲಯಕ್ಕೆ ಆರೋಪಿಯಾದ ನಿಮ್ಮ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:53. ಪ್ರಾ.ಸಾ.09 ಸಚಿನ ತಂದೆ ಶಿವಪುತ್ರ ಚಲವಾದಿ, ಆಗಿನ ವಿಜಯಪುರ ಎಸಿಬಿ ಕಚೇರಿಯ ಪೋಲಿಸ್ ಇನ್ಸಪೇಕ್ಟರ ರವರು ತಮ್ಮ ಸಾಕ್ಷ್ಯದಲ್ಲಿ, ದಿ: 08.01.2020 ರಂದು ಚಾಸಾ–19 ರವರಿಂದ ಈ ಪ್ರಕರಣದ ಮುಂದಿನ ತನಿಖೆಗಾಗಿ ಕಡತವನ್ನು ಪಡೆದುಕೊಂಡು,

ಪರಿಶೀಲಿಸಿ, ತನಿಖೆಯನ್ನು ಮುಂದುವರೆಸಿ, ಚಾಸಾ–15 ರವರ ಮೂಲಕ ಉಪ ನಿರ್ದೇಶಕರು, ಜಿಲ್ಲಾ ಖಜಾನೆ ಇವರಿಗೆ ಅವರ ಕಚೇರಿಯಿಂದ ಒಬ್ಬ ಸಾಕ್ಷಿಯನ್ನು ಹಾಗೂ ತೂಕ ಮತ್ತು ಅಳತೆಗಳ ಸಹಾಯಕ ನಿಯಂತ್ರಕರಿಗೂ ಕೂಡ ಅವರ ಕಚೇರಿಯಿಂದ ಒಬ್ಬರನ್ನು ಸಾಕ್ಷಿಯಾಗಿ ನಿಯೋಜಿಸಲು ವಿನಂತಿ ಪತ್ರವನ್ನು ಕೊಟ್ಟು ಕಳುಹಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:54. ಪ್ರಾ.ಸಾ.09 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಬೆಳಿಗ್ಗೆ 10.30 ಗಂಟೆಗೆ ಚಾಸಾ–2 & 3 ರವರು ಕಚೇರಿಗೆ ಬಂದಿದ್ದು, ಅವರಿಗೆ ದೂರು ಮತ್ತು ಪ್ರ.ವ.ವರದಿಯ ಮಾಹಿತಿಯನ್ನು ತಿಳಿಸಿ, ಪ್ರಾಯೋಗಿಕ ಪಂಚನಾಮೆಯ ಬಗ್ಗೆ ತಿಳಿಸಿ ಅದನ್ನು ಎಚ್ಚರಿಕೆಯಿಂದ ಗಮನಿಸುವಂತೆ ತಿಳಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:55 ಪ್ರಾ.ಸಾ.09 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ದೂರುದಾರರು ಹಾಜರು ಪಡಿಸಿದ ಸ್ಯಾಮಸಂಗ ಮೊಬೈಲ ಪೋನನಲ್ಲಿ ಆರೋಪಿಯಾದ ನಿಮ್ಮ ಮತ್ತು ದೂರುದಾರರ ಲಂಚದ ಬೇಡಿಕೆ ಇಟ್ಟ ಸಂಭಾಷಣೆಯನ್ನು ಒಳಗೊಂಡಿದ್ದು, ಅದನ್ನು ಪಂಚರಾದ ಚಾಸಾ–2 & 3 ರವರ ಸಮಕ್ಷಮ ಕೇಳಿಸಿ, ಅದನ್ನು ಎರಡು ಸಿಡಿಗಳಲ್ಲಿ

ದಾಖಲಿಸಿಕೊಂಡು, ಅವುಗಳಿಗೆ ಆರ್ಟಿಕಲ ನಂ.1 ಮತ್ತು 1(ಎ) ಎಂದು ಗುರುತಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:56. ಫ್ರಾ.ಸಾ.09 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಆ ಸಂಭಾಷಣೆಯನ್ನು ಲ್ಯಾಪಟಾಪ ಮೂಲಕ ಬೆರಳಚ್ಚು ಮಾಡಿಸಿ, ಪ್ರಿಂಟ್ ತೆಗೆಸಿ, ಅದಕ್ಕೆ ಪಂಚರ ಸಹಿಗಳನ್ನು ಪಡೆದುಕೊಂಡು, ಮೊಬೈಲ ಫೋನನಲ್ಲಿರುವ ಸಂಭಾಷಣೆಯನ್ನು ಅಳಿಸದಂತೆ ಸೂಚನೆ ನೀಡಿ ದೂರುದಾರರಿಗೆ ಮರಳಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:57. ಫ್ರಾ.ಸಾ.09 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ದೂರುದಾರರು ಹಾಜರು ಪಡೆಸಿದ ರೂ.500/- ಮುಖಬೆಲೆಯ ರೂ. 4000/-ಗಳ ನಂಬರನ್ನು ಚಾಸಾ-2 ರವರಿಗೆ ಓದಲು ಹೇಳಿದ್ದು, ಚಾಸಾ-3 ರವರು ಅದನ್ನು ಬರವಣಿಗೆ ಮಾಡಿಕೊಂಡಿದ್ದು, ಚಾಸಾ-14 ರವರಿಗೆ ಸೂಚಿಸಿದ ಮೇರೆಗೆ ಅವರು ಪೆನಾಪ್ತಲೀನ ಪೌಡರನ್ನು ಸದರಿ ನೋಟಗಳಿಗೆ ಹಚ್ಚಿದ್ದು, ಅವುಗಳನ್ನು ಎಣಿಸುವಂತೆ ಚಾಸಾ-3 ರವರಿಗೆ ಹೇಳಿದ್ದು, ಸದರಿಯವರು ಅವುಗಳನ್ನು ಎಣಿಸಿ, ದೂರುದಾರರ ಪ್ಯಾಂಟಿನ ಬಲಕಿಸೆಯಲ್ಲಿ ಇಟ್ಟಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:58. ಫ್ರಾ.ಸಾ.09 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಚಾಸಾ-3 ರವರು ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ಅದು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಅದನ್ನು ಮಾದರಿಗಾಗಿ ಸಂಗ್ರಹಿಸಿಕೊಂಡು, ಅದಕ್ಕೆ ಆರ್ಟಿಕಲ್ ನಂ.5 ಎಂದು ಗುರುತಿಸಿ, ದೂರುದಾರರು ಮತ್ತು ಪಂಚರಿಗೆ ಪೇನಾಪ್ತಲೀನ ಪೌಡರ ಮತ್ತು ಸೋಡಿಯಂ ಕಾರ್ಬೋನೇಟ ಬಗ್ಗೆ ತಿಳಿಸಿ, ದೂರುದಾರರಿಗೆ ಸದರಿ ಪೆನಾಪ್ತಲೀನ ಪೌಡರ ಹಚ್ಚಿದ್ದ ನೋಟುಗಳನ್ನು ಮುಟ್ಟದಂತೆ ಸೂಚಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:59. ಫ್ರಾ.ಸಾ.09 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದೂರುದಾರರಿಗೆ ಸದರಿ ಲಂಚದ ಹಣವನ್ನು ಆರೋಪಿಯಾದ ನಿಮಗೆ ಕೊಟ್ಟ ನಂತರ ತಲೆಯ ಮೇಲೆ ಕೈಯಾಡಿಸಿದ ಹಾಗೆ ಮಾಡಿ ಸನ್ನೆ ಕೊಡುವಂತೆ ಸೂಚಿಸಿ, ಅವರ ಮಾತುಕತೆ ನಡೆಯುವ ಕಾಲಕ್ಕೆ ಡಿಜಿಟಲ್ ವೈಸ್ ರೇಕಾರ್ಡನ್ನು ಆನ್ ಮಾಡುವಂತೆ ಹೇಳಿ, ಚಾಸಾ-2 ರವರಿಗೆ ದೂರುದಾರರೊಂದಿಗೆ ಆರೋಪಿಯಾದ ನಿನ್ನ ಕಚೇರಿಗೆ ಹೋಗಿ ಅಲ್ಲಿ ನಡೆಯುವ ಪ್ರಕ್ರಿಯೇಗಳ ಬಗ್ಗೆ ಗಮನಿಸುವಂತೆ ಸೂಚಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:60. ಪ್ರಾ.ಸಾ.09 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಪ್ರಾಯೋಗಿಕ ಪಂಚನಾಮೆಯನ್ನು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 12.45 ಗಂಟೆವರೆಗೆ ನಿ.ಪಿ.2 ರಂತೆ ಜರುಗಿಸಿ, ಆ ಕಾಲಕ್ಕೆ ಫೋಟೋಗಳನ್ನು ತೆಗೆದುಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:61. ಪ್ರಾ.ಸಾ.09 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ದೂರುದಾರರನ್ನು ವಿಚಾರಿಸಲಾಗಿ ಅವರು ಆರೋಪಿಯಾದ ನೀವು ಅವರನ್ನು ಇಂಡಿಯ ನಿಮ್ಮ ಕಚೇರಿಗೆ ಬರಲು ತಿಳಿಸಿರುವುದಾಗಿ ಹೇಳಿದ್ದು, ಅದರಂತೆ ಅವರು ಎರಡು ಇಲಾಖಾ ವಾಹನಗಳಲ್ಲಿ ದೂರುದಾರರು ಮತ್ತು ಪಂಚರೊಂದಿಗೆ ಮಧ್ಯಾಹ್ನ 1.00 ಗಂಟೆಗೆ ಹೊರಟು, 2.00 ಗಂಟೆಗೆ ಸದರಿ ಸ್ಥಳಕ್ಕೆ ತಲುಪಿದ್ದು, ದೂರುದಾರರು ಮತ್ತು ಚಾಸಾ–2 ರವರನ್ನು ಆರೋಪಿಯಾದ ನಿಮ್ಮ ಕಚೇರಿಗೆ ಕಳಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:62. ಪ್ರಾ.ಸಾ.09 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಸ್ವಲ್ಪ ಸಮಯದ ನಂತರ ದೂರುದಾರರು ಆರೋಪಿಯಾದ ನಿಮ್ಮ ಕಚೇರಿಯಿಂದ ಹೊರಗೆ ಬಂದು ಮೊದಲೇ ತಿಳಿಸಿದಂತೆ ತಲೆಯ ಮೇಲೆ ಕೈಯಾಡಿಸಿದ ಹಾಗೆ ಮಾಡಿ, ಸನ್ನೆ ಮಾಡಿದ್ದು, ತಕ್ಷಣ ಅವರು ಕಚೇರಿಯ ಒಳಗೆ ಬಂದಿದ್ದು, ದೂರದಾರರಿಗೆ ವಿಚಾರಿಸಲಾಗಿ ಅವರು ಆರೋಪಿಯಾದ ನೀವು ಲಂಚದ ಹಣವನ್ನು ಬಲಗೈಯಿಂದ ಪಡೆದುಕೊಂಡು ನಿಮ್ಮ ಪ್ಯಾಂಟಿನ ಬಲ ಕಿಸೆಯಲ್ಲಿ ಇಟ್ಟುಕೊಂಡಿರುವುದಾಗಿ ತಿಳಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:63. ಪ್ರಾ.ಸಾ.09 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಚಾಸಾ–4 ರಿಂದ ಚಾಸಾ–9 ರವರನ್ನು ಎಲ್ಲ ಪ್ರಕ್ರಿಯೇ ನಡೆಯುವವರೆಗೆ ಅಲ್ಲೆ ಇರುವಂತೆ ತಿಳಿಸಿ, ಚಾಸಾ–15 ರವರ ಮೂಲಕ ಎರಡು ಬಟ್ಟಲುಗಳಲ್ಲಿ ಸೋಡಿಯಂ ಕಾರ್ಬೋನೇಟ ದ್ರಾವಣವನ್ನು ತಯಾರಿಸುವಂತೆ ತಿಳಿಸಿದ್ದು, ಅದರಲ್ಲಿ ಆರೋಪಿಯಾದ ನಿನ್ನ ಎರಡು ಕೈಗಳನ್ನು ಪ್ರತ್ಯೇಕ ಬಟ್ಟಲಿನಲ್ಲಿ ತೊಳೆಯಲಾಗಿ, ಬಲಗೈ ತೊಳೆದ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಅದನ್ನು ಒಂದು ಗಾಜಿನ ಬಾಟಲಿನಲ್ಲಿ ಶೇಖರಿಸಿಕೊಂಡು, ಅದಕ್ಕೆ ಆರ್ಟಿಕಲ್ ನಂ.7 ಎಂದು ಗುರುತಿಸಿ, ಅಮಾನತ ಪಡೆಸಿಕೊಳ್ಳಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:64.ಪ್ರಾ.ಸಾ.09 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಎಡಗೈಯನ್ನು ತೊಳೆದ ದ್ರಾವಣದಲ್ಲಿ ಯಾವುದೇ ರೀತಿಯ ಬದಲಾವಣೆ ಆಗಿರುವುದಿಲ್ಲ ಹಾಗೂ ಅದನ್ನು ಕೂಡ ಒಂದು ಬಾಟಲಿಯಲ್ಲಿ ಶೇಖರಿಸಿಕೊಂಡು, ಅದಕ್ಕೆ ಆರ್ಟಿಕಲ ನಂ.8 ಎಂದು ಗುರುತಿಸಿ, ಅದನ್ನು ಸಹ ಅಮಾನತ ಪಡೆಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:65. ಪ್ರಾ.ಸಾ.09 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಲಂಚದ ಹಣದ ಬಗ್ಗೆ ಆರೋಪಿಯಾದ ನಿಮಗೆ ವಿಚಾರಿಸಲಾಗಿ ಅದನ್ನು ನೀವು ನಿಮ್ಮ ಪ್ಯಾಂಟಿನ ಬಲಕಿಸೆಯಲ್ಲಿ ಇಟ್ಟುಕೊಂಡಿರುವುದಾಗಿ ಒಪ್ಪಿಕೊಂಡಿರುತ್ತಿರಿ ಹಾಗೂ ಸದರಿ ನೋಟಗಳನ್ನು ಪಂಚರಾದ ಚಾಸಾ-2 ರವರ ಮೂಲಕ ತೆಗೆಸಿ, ಅವುಗಳನ್ನು ಮೊದಲು ಬರವಣಿಗೆ ಮಾಡಿಕೊಂಡಿದ್ದ ನೋಟಿನ ನಂಬರನೊಂದಿಗೆ ತಾಳೆ ಮಾಡಿ ನೋಡಲಾಗಿ ಅವು ಹೋಲಿಕೆ ಆಗುತ್ತಿದ್ದವು, ಅವುಗಳನ್ನು ಒಂದು ಲಕೋಟೆಯಲ್ಲಿ ಹಾಕಿ ಅಮಾನತ ಪಡೆಸಿಕೊಂಡು, ಅದಕ್ಕೆ ಆರ್ಟಿಕಲ ನಂ.9 ಎಂದು ಗುರುತಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:66. ಫ್ರಾ.ಸಾ.09 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರೋಪಿಯಾದ ನಿಮಗೆ ಬೇರೆ ಪ್ಯಾಂಟಿನ ವ್ಯವಸ್ಥೆ ಮಾಡಿಸಿ, ದಾಳಿ ಕಾಲಕ್ಕೆ ಧರಿಸಿದ್ದ ನಿಮ್ಮ ಪ್ಯಾಂಟನ್ನು ನಿಮ್ಮಿಂದ ಪಡೆದುಕೊಂಡು ಅದನ್ನು ಚಾಸಾ-15 ರವರಿಂದ ತಯಾರಿಸಿದ ಸೋಡಿಯಂ ಕಾರ್ಬೋನೇಟ ದ್ರಾವಣದಲ್ಲಿ ಅದರ ಹಿಂಬದಿಯ ಬಲಕಿಸೆಯನ್ನು ತೊಳೆಯಲಾಗಿ ಅದು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಅದನ್ನು ಒಂದು ಬಾಟಲಿನಲ್ಲಿ ಹಾಕಿ ಶೇಖರಿಸಿಕೊಂಡು, ಅದಕ್ಕೆ ಆರ್ಟಿಕಲ್ ನಂ.11 ಎಂದು ಗುರುತಿಸಿ ಅಮಾನತ ಪಡೆಸಿಕೊಳ್ಳಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:67.ಫ್ರಾ.ಸಾ.09 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರೋಪಿಯಾದ ನಿಮಗೆ ಸಮಜಾಯಿಸಿ ಕೊಡುವಂತೆ ಕೇಳಿದ್ದು, ನೀವು ನಿ.ಪಿ.7 ರಂತೆ ಸಮಜಾಯಿಸಿಯನ್ನು ನೀಡಿದ್ದು, ದೂರುದಾರರು ಮತ್ತು ಚಾಸಾ-2 ರವರು ಅದು ಸುಳ್ಳಾಗಿರುವುದಾಗಿ ಹೇಳಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:68. ಫ್ರಾ.ಸಾ.09 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ದೂರುದಾರರ ಅರ್ಜಿಗೆ ಸಂಬಂಧಿಸಿದ ದಾಖಲೆಗಳನ್ನು ಚಾಸಾ-4 ಅನೀಲ ಕುಲಕರ್ಣಿಯವರಿಂದ

ಧೃಡಿಕರಿಸಿ, ಪಡೆದುಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:69. ಫ್ರಾ.ಸಾ.09 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದೂರುದಾರರಿಗೆ ನಿಡಿದ ವೈಸ್ ರೇಕಾರ್ಡರನ್ನು ಅವರ ಆನ್ ಮಾಡದೇ ಇದ್ದರಿಂದ ಅದರಲ್ಲಿ ಯಾವುದೇ ಸಂಭಾಷಣೆ ದಾಖಲಾಗದಿದ್ದರಿಂದ, ಈ ಮೊದಲು ದೂರುದಾರರು ತಮ್ಮಮೊಬೈಲನಲ್ಲಿ ರೇಕಾರ್ಡ ಮಾಡಿಕೊಂಡು ಬಂದಿದ್ದ ಸಂಭಾಷಣೆಯನ್ನು ಚಾಸಾ–4 ರಿಂದ 9 ರವರಿಗೆ ಕೇಳಿಸಿದ್ದು, ಸದರಿಯವರು ಆರೋಪಿಯಾದ ನಿನ್ನ ಧ್ವನಿಯನ್ನು ಅದರಲ್ಲಿ ಗುರುತಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:70. ಫ್ರಾ.ಸಾ.09 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಸದರಿ ಸಂಭಾಷಣೆಯ ಆಯ್ದು ಭಾಗವನ್ನು ಬರವಣಿಗೆ ಮಾಡಿಸಿ, ಆರೋಪಿಯಾದ ನಿಮ್ಮಿಂದ ಮತ್ತು ದೂರುದಾರರಿಂದ ಮೂರು ಮೂರು ಸಾರಿ ಓದಿಸಿ, ಅವುಗಳನ್ನು ಲ್ಯಾಪಟಾಪಗೆ ಅಳವಡಿಸಿ, ಸಿಡಿಗಳಲ್ಲಿ ದಾಖಲಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:71. ಪ್ರಾ.ಸಾ.09 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಎಲ್ಲ ಅಮಾನತ ಪಡೆಸಿಕೊಂಡ ಆರ್ಟಿಕಲಗಳ ಮೇಲೆ ಅವರ ಮತ್ತು ಪಂಚರ ಸಹಿ ವುಳ್ಳ ಚೀಟಿಗಳನ್ನು ಅಂಟಿಸಿ, **'Z'** ಅಕ್ಷರದಿಂದ ಮೊಹರು ಮಾಡಿ, ಮಾದರಿ ಮೊಹರನ್ನು ಚಾಸಾ–2 ರವರಿಗೆ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:72. ಪ್ರಾ.ಸಾ.09 ರವರು ಮುಂದುವರೆದ ತಮ್ಮ ಸಾಕ್ಷ್ಯದಲ್ಲಿ, ನಂತರ ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ಪಂಚರಾದ ಚಾಸಾ–2 ಮತ್ತು ಚಾಸಾ– 3 ರವರ ಸಮಕ್ಷಮ ನಿ.ಪಿ.24 ರಂತೆ ತಯಾರಿಸಿರುವುದಾಗಿ ಹಾಗೂ ಪಂಚನಾಮೆಯನ್ನು ಮಧ್ಯಾಹ್ನ 2.15 ರಿಂದ ಸಂಜೆ 6.15 ರವರೆಗೆ ಪಂಚರ ಸಮಕ್ಷಮ ನಿ.ಪಿ.6 ರಂತೆ ಜರುಗಿಸಿ, ಚಾಸಾ–13 ರವರಿಂದ ಫೋಟೋಗಳನ್ನು ತೆಗೆಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:73. ಪ್ರಾ.ಸಾ.09 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಚಾಸಾ–4 ರಿಂದ 9 ರವರ ಹೇಳಿಕೆಗಳನ್ನು ಪಡೆದುಕೊಂಡಿರುವುದಾಗಿ ಹಾಗೂ ಜಪ್ತಾದ

ಮುದ್ದೆಮಾಲುಗಳನ್ನು ಮಾಲುಪಟ್ಟಿಯೊಂದಿಗೆ ಈ ನ್ಯಾಯಾಲಯಕ್ಕೆ ಸಲ್ಲಿಸಿರುವುದಾಗಿ ಹಾಗೂ ದಿ: 09.01.2020 ರಂದು ಆರೋಪಿತರಾದ ನಿಮ್ಮನ್ನು ನ್ಯಾಯಾಂಗ ಬಂಧನದ ಅರ್ಜಿಯೊಂದಿಗೆ ಈ ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:74. ಪ್ರಾ.ಸಾ.09 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿ: 16.01.2020 ರಂದು ಚಾಸಾ-12 ರವರ ಮೂಲಕ ಆರ್ಟಿಕಲ್ ನಂ.2 ರಿಂದ 12 ನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರಾದೇಶಿಕ ರಾಸಾಯನಿಕ ಪ್ರಯೋಗಾಲಯ ಧಾರವಾಡ ಇಲ್ಲಿಗೆ ಕಳಿಸಿದ್ದು, ಸದರಿಯವರು ಅದನ್ನು ತಲುಪಿಸಿದ ಬಗ್ಗೆ ಸ್ವೀಕೃತಿಯನ್ನು ತಂದು ಹಾಜರು ಪಡಿಸಿದ್ದು, ಅದನ್ನು ಪಡೆದುಕೊಂಡು, ಅವರ ಹೇಳಿಕೆಯನ್ನು ಸಹ ದಾಖಲಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:75. ಪ್ರಾ.ಸಾ.09 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿ: 21.01.2020 ರಂದು ಆರೋಪಿಯಾದ ನಿಮ್ಮ ಸೇವಾ ಮಾಹಿತಿಯನ್ನು ನಿ.ಪಿ.29 ರಂತೆ ಪಡೆದುಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:76. ಪ್ರಾ.ಸಾ.09 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿ: 05.02.2020 ರಂದು ಚಾಸಾ–10 ರವರ ಮೂಲಕ ಆರ್ಟಿಕಲ್ ನಂ.1, 13 ಮತ್ತು 14 ನ್ನು ರಾಸಾಯನಿಕ ಪರೀಕ್ಷೆಗಾಗಿ ರಾಜ್ಯ ವಿಧಿವಿಜ್ಞಾನ ಪ್ರಯೋಗಾಲಯ ಮಡಿವಾಳ, ಬೆಂಗಳೂರು ಇಲ್ಲಿಗೆ ಕಳುಹಿಸಿದ್ದು, ಚಾಸಾ–10 ರವರು ಸದರಿ ಆರ್ಟಿಕಲಗಳನ್ನು ತಲುಪಿಸಿದ ಬಗ್ಗೆ ನಿ.ಪಿ.31 ರಂತೆ ಸ್ವೀಕೃತಿಯನ್ನು ತಂದು ಹಾಜರು ಪಡೆಸಿದ್ದು, ಅದನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:77. ಪ್ರಾ.ಸಾ.09 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅವರ ವರ್ಗಾವಣೆ ಆದ ಕಾರಣ ಪ್ರಕರಣ ಕಡತವನ್ನು ಮುಂದಿನ ತನಿಖೆಗಾಗಿ ವಿಜಯಪುರ ಎಸಿಬಿ ಕಚೇರಿಯ ಪೋಲಿಸ್ ಇನ್ಸಪೇಕ್ಟರ್ ಎಸ್.ಆರ್.ಗಣಾಚಾರಿ ಇವರಿಗೆ ಹಸ್ತಾಂತರಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:78. ಪ್ರಾ.ಸಾ.10 ವೇಣುಗೋಪಾಲ ತಂದೆ ಎಮ್.ಲಿಂಗಪ್ಪ, ಆಗಿನ ವಿಜಯಪುರ ಎಸಿಬಿ ಕಚೇರಿಯ ಡಿವೈಎಸ್ಪಿ, ರವರು ತಮ್ಮ ಸಾಕ್ಷ್ಯದಲ್ಲಿ, ದಿ: 08.01.2020 ರಂದು ಬೆಳಿಗ್ಗೆ 9.05 ಗಂಟೆಗೆ ಅವರು ಕಚೇರಿಯಲ್ಲಿದ್ದಾಗ, ಚಾಸಾ–1 ಮಹಾಂತೇಶ ಅಗಸರ ಒಂದು

ಲಿಖಿತ ದೂರಿನೊಂದಿಗೆ ಬಂದಿದ್ದು, ಅದರಲ್ಲಿ ಅವರ ತಂದೆಗೆ ಸೇರಿದ ವರಕನಹಳ್ಳಿ ಗ್ರಾಮದ ಒಂದು ಎಕರೆ ಜಮೀನು ಕೃಷ್ಣಾ ಮೇಲ್ದಂಡೆ ಯೋಜನೆ ಅಡಿ ಸರಕಾರದವರು ಪಡೆದುಕೊಂಡಿದ್ದು, ಅದರ ಪರಿಹಾರ ಹಣದ ಬಗ್ಗೆ ವಿಚಾರಿಸಲು ದೂರುದಾರರು ಇಂಡಿಯ **SLAO** ಕಚೇರಿಗೆ ಆರೋಪಿಯಾದ ನಿಮ್ಮ ಬಳಿ ಬಂದಾಗ ನೀವು ಅವರಿಗೆ ಸದರಿ ಕೆಲಸಕ್ಕೆ ರೂ.5000/- ಲಂಚದ ಬೇಡಿಕೆ ಇಟ್ಟಿದ್ದು, ಕೊನೆಗೆ ರೂ.4000/-ಗಳಿಗೆ ಒಪ್ಪಿಕೊಂಡಿರುತ್ತಿರಿ ಎಂದು ನಮೂದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:79. ಫ್ರಾ.ಸಾ.10 ರವರು ಮುಂದುವರೆದ ತಮ್ಮ ಸಾಕ್ಷ್ಯದಲ್ಲಿ, ದೂರುದಾರರು ಅವರ ಮೊಬೈಲನಲ್ಲಿ ರೇಕಾರ್ಡ ಮಾಡಿಕೊಂಡು ಬಂದಿದ್ದ ಅವರ ಮತ್ತು ಆರೋಪಿಯಾದ ನಿಮ್ಮ ಲಂಚದ ಬೇಡಿಕೆ ಇರುವ ಸಂಭಾಷಣೆಯನ್ನು ಕೇಳಿಸಿದ್ದು, ಸದರಿ ಸಂಭಾಷಣೆ ಮತ್ತು ದೂರನ್ನು ಪರಿಶೀಲಿಸಿ, ಆರೋಪಿಯಾದ ನಿಮ್ಮ ವಿರುದ್ಧ ಗುನ್ನಾ ನಂ.1/2020 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡು, ಅದನ್ನು ಒಂದು ಲಕೋಟೆಯಲ್ಲಿಟ್ಟು, ಈ ನ್ಯಾಯಾಲಯಕ್ಕೆ ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:80. ಪ್ರಾ.ಸಾ.10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ–10 ರವರಿಗೆ ಹಸ್ತಾಂತರಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:81. ನಿಮ್ಮ ಪರ ಸಾಕ್ಷಿ ಮಾಡಿಸುವುದು ಹಾಗೂ ದಾಖಲೆ ಹಾಜರು ಪಡೆಸುವುದು ಇದೆಯಾ ?

ಉತ್ತರಃ

ಪ್ರಶ್ನೆ 82. ನೀವು ಬೇರೆ ಏನಾದರೂ ಹೇಳುವುದಿದೆಯಾ ?
ಉತ್ತರಃ

(ಈ ಮೇಲ್ಕಾಣಿಸಿದ ಆರೋಪಣೆಯನ್ನು ಆರೋಪಿಗೆ ಗೊತ್ತಿದ್ದ ಭಾಷೆಯಲ್ಲಿ ಓದಿ ಹೇಳಿ ತಿಳಿಸಿದ ನಂತರ ಹೇಳಿಕೆಯನ್ನು ಪಡೆದು ನಮೂದಿಸಿದ್ದು ಸಂಪೂರ್ಣ ಮತ್ತು ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸಿದ್ದೇನೆ.)

**Sd/-**

ಸ್ಥಳ : ವಿಜಯಪುರ
ದಿನಾಂಕಃ 18.11.2025

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.